ಪುನಸ್ಸಮಾಗಮ– ಇವು ಕಾವ್ಯದ ಮುಖ್ಯ ಸ್ವರಗಳು. ಇಡೀ ಕಾವ್ಯದ ಉದ್ದಕ್ಕೂ ಕಾಮ, ಮದನ, ಅನಂಗ, ಮನೋಭವ ಮೊದಲಾದ ಪದ ಪ್ರಯೋಗವಿದ್ದು; ಅವುಗಳ ಜೊತೆ ಉದ್ರೇಕ, ಆತುರ, ಪರವಶ, ವಿಕಾರ–ಈ ಶಬ್ದಗಳು ಬೆರೆತು ಬಂದಿವೆ. ಪುರುಷಾರ್ಥಗಳಲ್ಲಿ ಒಂದಾದ ಕಾಮ ಇಂದ್ರಿಯಾತೀತವಾದುದಲ್ಲ; ಇಂದ್ರಿಯಗ್ರಾಹ್ಯ ಅಪೇಕ್ಷೆ. ಹೀಗಾಗಿ, ಮನೋಪರವಶತೆ ಎನ್ನುವುದು ಪೂರ್ವನಿಯೋಜಿತವಾದುದಲ್ಲ. ಕಾದಂಬರಿ–ಚಂದ್ರಾಪೀಡನ ಪ್ರಥಮ ಸಂದರ್ಶನವನ್ನು ಕುರಿತ ಉದ್ಗಾರವಿದು:

ಬಗೆಯೊಳ್ ಪಿರಿದುಂ ಕೌತುಕ|ಮೊಗೆಯಲ್ಕನ್ಯೋನ್ಯಮೊಲ್ದು ನೋಡುತ್ತಿರ್ಪ
ನ್ನೆಗಮೊ ರ್ಮೊದಲಿರ್ವರದಿ|ಟ್ಟಿಗಳುಂ ಸಮದಿಟ್ಟಿಯಾದುವಂತಾಕ್ಷಣದೊಳ್

ಮೊದಲ ನೋಟದಲ್ಲಿಯೇ ಇಬ್ಬರ ದೃಷ್ಟಿಗಳೂ ಒಟ್ಟಿಗೆ ಸೇರಿ, ಒಬ್ಬರನೊಬ್ಬರು ಬಹಳ ಕುತೂಹಲದಿಂದ ನೋಡುವುದು ಒಂದು ಬಗೆಯ ಅವ್ಯಕ್ತ ಕಾಮನೆಯಾಗುತ್ತದೆ. ಅದನ್ನು ಉದ್ದೀಪನಗೊಳಿಸುವವನು ಚಂದ್ರ/ಬೆಳದಿಂಗಳು ಎಂಬುದು ಕವಿಯ ತರ್ಕ. ಅದರ ಪರಿಣಾಮಗಳನ್ನು ಇಡೀ ಕಾವ್ಯದಲ್ಲಿ ಪ್ರತಿಮಿಸಲಾಗಿದೆ.

ಕಾದಂಬರಿಯ ಆರಂಭ ಮತ್ತು ಅಂತ್ಯಭಾಗವನ್ನು ಕವಿ ತಾನೇ ಹೇಳುತ್ತಾನೆ. ಉಳಿದ ಕಥಾನಕವು ಗಿಳಿ, ಜಾಬಾಲಿ ಋಷಿ, ಮಹಾಶ್ವೇತೆ, ಕಪಿಂಜಲರಿಂದ ನಿರೂಪಿತವಾಗುತ್ತದೆ. ಕತೆ ಶೂದ್ರಕನ ಆಸ್ಥಾನದಿಂದ ಮೊದಲಾಗುತ್ತದೆ. ಚಂಡಾಲ ಕನ್ಯೆಯೊಬ್ಬಳು ಗಿಳಿಯೊಂದನ್ನು ತಂದು ರಾಜನಿಗೆ ಒಪ್ಪಿಸುತ್ತಾಳೆ. ಅದು ತಾನು ಹುಟ್ಟಿಬೆಳೆದು, ಜಾಬಾಲಿ ಋಷಿಗಳ ಆಶ್ರಮದಲ್ಲಿ ರಕ್ಷಣೆ ಪಡೆದ ಕತೆಯನ್ನು ವಿವರಿಸುತ್ತದೆ. ರಾಜವೈಭವದ ವರ್ಣನೆ, ಚಂಡಾಲಕನ್ಯೆಯ ರೂಪವರ್ಣನೆ, ವಿಂಧ್ಯಾಟವಿಯ ವರ್ಣನೆ, ಬೇಟೆಯ ವರ್ಣನೆ–ಇವುಗಳನ್ನು ಕಥನ ಕೌಶಲಿಯಾದ ನಾಗವರ್ಮ ಚಿತ್ರವತ್ತಾಗಿ ನಿರೂಪಿಸಿದ್ದಾನೆ. ಪಂಪಾಸರೋವರದ ಪಶ್ಚಿಮ ತೀರದಲ್ಲಿ ಒಂದು ಹಳೆಯ ಬೂರುಗದ ಮರದಲ್ಲಿ, ನಾನಾ ದೇಶಗಳಿಂದ ಬಂದ ಗಿಳಿಗಳ ಹಿಂಡು, ಯಾವ ಆತಂಕವೂ ಇಲ್ಲದೆ ಬೀಡು ಬಿಟ್ಟಿದೆ:

ಮರಗಟ್ಟೆಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತ ದಿಕ್ಚಕ್ರವಾಳಾಂ
ತರಮಂ ನೋಡಲ್ಕೆ ನೀಳ್ದಂತಿರೆ ಬೆಳೆದ ಮಹಾಶಾಖೆಯೊಳ್ ತಾಂಡವಾಡಂ
ಬರದೊಳ್ ನಾನಾವಿಧಂ ನರ್ತಿಪ ನಟನ ಭುಜಾದಂಡಮೋಪೇಟಿಮೆಂಬಂ
ತಿರಮೇಯ ಸ್ಕಂಧಮಂ ಸಂಧಿಸೆ ಜರಠ ಮಹಾಶಾಲ್ಮಲೀ ವೃಕ್ಷಮಿರ್ಕುಂ

ಎಲವಂ ಮಡುಲ್ತುದೆನೆಯೆಲೆ|ಕೆಲಕೆಲವಾಗಿರ್ದುಮೆಲೆಯಪುದುವಿಂದವೆಕ
ತ್ತಲಿಸಿದವೋಲಿರ್ಪುದಂದ|ಗ್ಗಲಿಸಿದ ಗಿಳಿವಿಂಡುಗಳ ಪೊದಳ್ದಪಸುರ್ಪಿಂ

ಆ ಬೂರುಗದ ಮರದ ಬುಡವನ್ನು ಒಂದು ಹೆಬ್ಬಾವು ಸುತ್ತಿಕೊಂಡಿತ್ತು. ಅದು ಮರಕ್ಕೆ ನೀರುಣಿಸಲು ಕಟ್ಟಿರುವ ಪಾತಿಯಂತೆ ಕಾಣುತ್ತಿತ್ತು. ಅದರ ನೀಳವಾದ ಕೊಂಬೆಗಳು ದಿಕ್ಕುಗಳನ್ನು ನೋಡಲು ಉದ್ದವಾದಂತೆ, ತಾಂಡವ ನೃತ್ಯದಲ್ಲಿ ನಾನಾ ಬಗೆಯಲ್ಲಿ ನರ್ತಿಸುತ್ತಿರುವ ಶಿವನ ಭುಜಾದಂಡದಂತೆ ತೋರುತ್ತಿದ್ದವು. ಅಷ್ಟೇ ಅಲ್ಲ, ಆ ಮರವು ಬಹಳ ಜೀರ್ಣವಾಗಿದ್ದರಿಂದ ಎಲೆಗಳು ಹೆಚ್ಚಿರಲಿಲ್ಲ. ಆದರೂ, ಆವರಿಸಿ ಕುಳಿತಿದ್ದ ಗಿಳಿಗಳು ಹರಡುತ್ತಿದ್ದ ಹಸುರಿನಿಂದ